ಇದ್ಯಾತ್ರ ಮೂಡೆ?
ತಟಗುಣಿ ಮೂಡೆ.
ನಮ್ಮ ಕತ್ತೀಲಿ ಕಡೀಲೋ?
ಸಿವನ ಕೆತ್ತೀಲಿ ಕಡೀಲೋ?
ಸಿವನ ಕತ್ತೀಲಿ
ಕಚಕ್!

ಕೈಯೆಲ್ಲ ಎತ್ಲಾಗೋದು?
ಸಂತಿಗೋದು
ಸಂತೇಲೇನು ತಂದು?
ಬಾಳೆಹಣ್ಣ ತಂದು
ಬಾಳೆ ಹಣ್ಣ ಏನ್ಮಾಡ್ದೆ?
ಹಣ್ಣಣ್ಣ ನಾವು ತಿಂದು
ಸಿಪ್ಪೆ ಕದಿನಿಂದಕೆ ಹಾಕಿದೆ.
ಕದೇನು ಕೊಡ್ತು?
ಚಕ್ಕೆ ಕೊಡ್ತು.
ಚಕ್ಕೆ ಏನ್ಮಾಡಿದೆ?
ಒಲಿಗೆ ಹಾಕದೆ.
ಒಲೇನು ಕೊಡ್ತು?
ಬೂದಿ ಕೊಡ್ತು.
ಬೂದಿ ಏನ್ ಮಾಡಿದೆ?
ತಿಪ್ಪೆಗೆ ಹಾಕಿದೆ.
ತಿಪ್ಪೇನು ಕೊಡ್ತು?
ಗೊಬ್ಬರ ಕೊಡ್ತು
ಗೊಬ್ಬರ ಏನ್ಮಾಡಿದೆ?
ಗದ್ದಿಗೆ ಹಾಕಿದೆ.
ಗದ್ದೇನು ಕೊಡ್ತು?
ಭತ್ತ ಕೊಡ್ತು.
ಭತ್ತ ಏನ್ಮಾಡ್ದೆ?
ಅಕ್ಕಕ್ಕಿ ನಾವು ತಿಂದು
ಒಟ್ಟೊಟ್ಟು ಮ್ಯಾದರಿಗೆ ಕೊಟ್ಟು.
ಮ್ಯಾದರೇನು ಕೊಟ್ರು?
ತೊಟ್ಲು ಕೊಟ್ರು.
ತೊಟ್ಲಾಗೇನಿತ್ತು?
ಮಗಿತ್ತು.
ಮಗೀನ ಕೈಯಾಗೇನಿತ್ತು?
ಗಿಳ್ಳಿತ್ತು
ಗಿಳ್ಳಾಗೇನಿತ್ತು?
ಅನ್ನಿತ್ತು,
ಅನ್ನದಾಗೇನಿತ್ತು?
ಆಲಿತ್ತು
ಆಲಿನಾಗೇನಿತ್ತು?
ಮೊಸರಿತ್ತು
ಮೊಸರಾಗೇನಿತ್ತು?
ಮಜ್ಜಿಗಿತ್ತು
ಮಜ್ಜಿಗ್ಯಾಗೇನಿತ್ತು?
ಬೆಣ್ಣಿತ್ತು.
ಬೆಣ್ಣೆಗೇನಿತ್ತು?
ತುಪ್ಪಿತ್ತು
ತುಪ್ಪದಾಗೇನಿತ್ತು?
ನೊಣಿತ್ತು.
ನೊಣಾ ತಿನ್ನೋ ಗೊಲ್ಲಜ್ಜೀ
ನೊಣಾತಿನ್ನೋ ಗೊಲ್ಲಜ್ಜೀ.

ಇಡೀ ಪದ್ಯ ಪ್ರಶ್ನೆ ಉತ್ತರಗಳ ಮೂಲಕ ಬೆಳೆದಿದೆ. ಒಂದು ಪ್ರಶ್ನೆಗೆ ಒಂದು ಉತ್ತರವಿದ್ದರೆ, ಆ ಉತ್ತರಕ್ಕೆ ಮತ್ತೊಂದು ಪ್ರಶ್ನೆ ಹುಟ್ಟುತ್ತದೆ. ಅದಕ್ಕೆ ಮತ್ತೊಂದು ಉತ್ತರ ಕೊಡಲಾಗುತ್ತದೆ. ಆ ಉತ್ತರಕ್ಕೆ ಮತ್ತೆ ಪ್ರಶ್ನೆ. ಹೀಗೆ ಪ್ರಶ್ನೆ ಉತ್ತರಗಳ ಸರಪಳಿಯ ರಚನೆ ಈ ಪದ್ಯ. ಇಡೀ ಪದ್ಯದಾಟವೇ ಮಕ್ಕಳ ಸಾಹಿತ್ಯ ರಚನೆಗೆ ಒಂದು ಮಾದರಿ ಪದ್ಯದಂತಿದೆ. ಮಕ್ಕಳ ಮನಸ್ಸನ್ನು ಹೇಗೆ ಬೆಳಸಬೇಕು ಎಂಬುದನ್ನು ಈ ಪದ್ಯ ಸೂಚಿಸುತ್ತಿದೆ. ಪ್ರತಿಯೊಂದು ಸಂಗತಿಗೂ ಮಗು ಕುತೂಹಲದ ಪ್ರಶ್ನೆ ಕೇಳುತ್ತದೆ. ಎಷ್ಟೋ ಸಾರಿ ಮಗು ಕೇಳುವ ಪ್ರಶ್ನೆಗಳಿಗೆ ದೊಡ್ಡವರು ಉತ್ತರ ಕೊಡಲಾರದೆ 'ಏ ತಲೆಹರಟೆ ಸುಮ್ಮನಿರು' ಎಂದು ಮಗುವಿನ ಬಾಯಿ ಮುಚ್ಚಿಸುತ್ತಾರೆ. ಹಾಗೆ ಮಾಡುವುದರಿಂದ ಮಗುವಿನ ಮುಗ್ಧ ಕುತೂಹಲಿತ ಭಾವಕೋಶದ ಮೇಲೆ ಆಘಾತವುಂಟಾಗುತ್ತದೆ. ಬೆಳೆಯುವ ಮನಸ್ಸು ಮುರುಟುತ್ತಾ ಹೋಗುತ್ತದೆ. ಅದಕ್ಕಿಂತ ಈ ಪದ್ಯದ ಕೊನೆಯಲ್ಲಿ ಬರುವ ಹಾಸ್ಯಭರಿತವಾದರೂ ಆಟದ ಸೋಗಿನಲ್ಲಿ ಕುತೂಹಲಕ್ಕೆ ತೆರೆ ಎಳೆಯುವ ಈ ಉಪಾಯ ಮನೋವೈಜ್ಞಾನಿಕತೆಯಿಂದ ಕೂಡಿದ ಪ್ರತಿಕ್ರಿಯೆಯಾಗಿದೆ.